# ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ಬಾಲಕಿಯರ ವಸತಿ ಶಾಲೆ, ದಾವಣಗೆರೆ ಟೌನ್ ದಾವಣಗೆರೆ ತಾಲ್ಲೂಕು, ದಾವಣಗೆರೆ ಜಿಲ್ಲೆ.



| | |
|---|---|
| ಪ್ರಾರಂಭವಾದ ವರ್ಷ ಮತ್ತು ದಿನಾಂಕ | 2007-08, 01-06-2007 |
| ಸರ್ಕಾರಿ ಆದೇಶ ಸಂಖ್ಯೆ | ಸಕಇ-8-ಅಸಂಯೋ 2007 ಬೆಂಗಳೂರು |
| ಕಟ್ಟಡದ ಸ್ವರೂಪ ಮತ್ತು ವಿಸ್ತೀರ್ಣ | ಬಾಡಿಗೆ ಕಟ್ಟಡ 12,801.26 ಚದರ ಅಡಿ |
| ಅಕ್ಷಾಂಶ | $14^{\circ}.46$ |
| ರೇಖಾಂಶ | $75^{\circ}.90$ |
| ಮಂಜೂರಾತಿಯಾದ ವಿದ್ಯಾರ್ಥಿಗಳ ಸಂಖ್ಯೆ | 250 |
| ಪ್ರಸ್ತುತ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ | 220 |
| ತರಗತಿ | 6 ರಿಂದ 10ನೇತರಗತಿವರೆಗೆ |
| ಮಾಧ್ಯಮ | ಆಂಗ್ಲ |

ಕರ್ನಾಟಕದ ಹೃದಯ ಭಾಗದಲ್ಲಿರುವ ಹಲವು ನಾಮಗಳಿಂದ ಪ್ರಸಿದ್ಧಿಯಾದ ಜ್ಞಾನ ಕಾಶಿ, ದೇವನಗರಿ, ಮ್ಯಾಂಚೆಸ್ಟರ್, ಜಿಮ್ನಾಸ್ಟಿಕ್ ನಗರ, ಬೆಣ್ಣೆ ನಗರಿ ಎಂದು ದಾವಣಗೆರೆ ನಗರವನ್ನು ಕರೆಯುತ್ತಾರೆ. ಇಂತಹ ನಗರದಲ್ಲಿ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ಬಾಲಕಿಯರ ವಸತಿ ಶಾಲೆ ದಾವಣಗೆರೆ ಟೌನ್, ದಾವಣಗೆರೆ ಜಿಲ್ಲೆಯಲ್ಲಿ ದಿನಾಂಕ 01-06-2007 ರಂದು ಬಾಡಿಗೆ ಕಟ್ಟಡದಲ್ಲಿ ಪ್ರಾರಂಭವಾಗಿದೆ.

**ಕಲಿಕೆಯೆಂಬುದು ನಿಂತ ನೀರಲ್ಲ, ಜೀವನ ಪರ್ಯಂತ ಪ್ರತಿ ನಿಮಿಷವು ಹೊಸತನ್ನು ಕಲಿಯುತ್ತಲೆ ಇರುತ್ತೇವೆ.** ವಿಶೇಷವಾಗಿ ಭಾಷಾ ವಿಷಯಗಳಿಗೆ ಸಂಬಂಧಿಸಿದ ಕೌಶಲವಾದ ಸ್ಪಷ್ಟ ಓದು, ಶುದ್ಧ ಬರವಣಿಗೆಗೆ ಕಾಪಿ ಪುಸ್ತಕ. ಕಾಗುಣಿತ, ಒತ್ತಾಕ್ಷರಗಳ ಅಭ್ಯಾಸ ಮಾಡಿಸುವುದು. ಗುಂಪು ಚಟುವಟಿಕೆಗಳ ಮೂಲಕ ಪಾಠ ಓದಿಸುವುದು. ವಿದ್ಯಾರ್ಥಿಗಳಿಂದ ಸ್ಪಷ್ಟವಾಗಿ, ನಿರರ್ಗಳವಾಗಿ, ವ್ಯಾಕರಣ ದೋಷವಿಲ್ಲದಂತೆ ಹಾಗೂ ಧ್ವನಿ ಏರಿಳಿತಗಳೊಂದಿಗೆ ಓದುವಂತೆ, ಉಳಿದ ವಿಷಯಗಳಲ್ಲಿ ಚಿತ್ರಗಳನ್ನು ಸುಲಭವಾಗಿ ಕಲಿಯುವಂತೆ ಮಾಡಲು ರಂಗೋಲಿಯಂತಹ ಚಟುವಟಿಕೆಯ ಸ್ಪರ್ಧೆಯನ್ನು ಆಯೋಜಿಸುವುದರ ಮೂಲಕ ಸಾಂಸ್ಕೃತಿಕ ಕಾರ್ಯಗಳಿಗೆ ಪ್ರೋತ್ಸಾಹಿಸುತ್ತೇವೆ.

**ವಿದ್ಯಾರ್ಥಿಗಳಲ್ಲಿ ಧನಾತ್ಮಕ ಕಲಿಕೆ ನಮ್ಮ ಆದ್ಯತೆ,** ಎಂಬುದಕ್ಕೆ ವಿದ್ಯಾರ್ಥಿಗಳು ಆಸಕ್ತಿ, ಅಭಿರುಚಿಗೆ ಅನುಗುಣವಾಗಿ ತಮ್ಮ ಪ್ರತಿಭೆಯನ್ನು ಅನಾವರಣಗೊಳಿಸುತ್ತಿದ್ದಾರೆ. ಅಲ್ಲದೆ ವಲಯದಿಂದ ಜಿಲ್ಲಾಮಟ್ಟದವರೆಗೆ ಏರ್ಪಡಿಸಲಾಗುವ ಪ್ರತಿಭಾ ಕಾರಂಜಿಯಲ್ಲಿ ಭಾಗವಹಿಸಿ ರಸಪ್ರಶ್ನೆ, ಪ್ರಬಂಧ ಸ್ಪರ್ಧೆ, ಚರ್ಚಾಸ್ಪರ್ಧೆ, ಏಕಪಾತ್ರಾಭಿನಯ, ಭಾವಗೀತೆ, ಭಕ್ತಿಗೀತೆ, ಜನಪದಗೀತೆ, ಚಿತ್ರಕಲೆ ಮುಂತಾದವುಗಳಲ್ಲಿ ವಿದ್ಯಾರ್ಥಿಗಳು ಭಾಗವಹಿಸಿ ತಮ್ಮ ಪ್ರತಿಭೆಯನ್ನು ತೋರಿಸುವ ಮೂಲಕ ಪ್ರಶಸ್ತಿ ಪತ್ರಗಳನ್ನು ಗಳಿಸುತ್ತದ್ದಾರೆ.

"ಇಂದಿನ ಮಕ್ಕಳೆ, ನಾಳಿನ ಭವ್ಯ ಪ್ರಜೆಗಳು" ವಿದ್ಯಾರ್ಥಿಗಳಲ್ಲಿ ನಾಯಕರು ಹೊಂದಿರಬೇಕಾದ ಗುಣಗಳು ಮತ್ತು ಕರ್ತವ್ಯಗಳ ಬಗ್ಗೆ ಸೂಕ್ತ ಉದಾಹರಣೆಗಳ ಮೂಲಕ ಅವರಿಗೆ ತಿಳಿಸಿ ಅವರಲ್ಲಿ ಅದರ ಬಗ್ಗೆ ಅರಿವು ಮೂಡಿಸಲಾಗುತ್ತಿದೆ. ಶಾಲೆಯಲ್ಲಿ ಸೇವಾದಳ ದಂತಹ ಸಂಘಗಳ ರಚನೆ ಮಾಡಿ ಮಕ್ಕಳಲ್ಲಿ ಸಾಮಾಜಿಕ ಸೇವಾ ಮನೋಭಾವನೆ, ಸಾಮಾಜಿಕ ಅರಿವು ನೈತಿಕತೆ ಮುಂತಾದ ಗುಣಗಳನ್ನು ಬೆಳಸಲಾಗುತ್ತಿದೆಸಂವಿಧಾನದ ಪ್ರಸ್ತಾವನೆಯಲ್ಲಿರುವ ಪ್ರಮುಖವಾದ ಅಂಶಗಳನ್ನು ಮಕ್ಕಳಿಗೆ ಹೇಳಿಸುವುದು, ನಾಡಗೀತೆ, ರಾಷ್ಟ್ರಗೀತೆ, ದೇಶಭಕ್ತಿ ಗೀತೆಗಳ ಮೂಲಕ ಅವರಲ್ಲಿ ರಾಷ್ಟ್ರಾಭಿಮಾನದ ಗುಣಗಳನ್ನು ಬೆಳೆಸಲಾಗುವುದು.ಒಟ್ಟಾರೆಯಾಗಿ ಮಕ್ಕಳಲ್ಲಿ ಪರಸ್ಪರ ಸ್ನೇಹ, ಪ್ರೇಮ, ಸತ್ಯ, ಪ್ರಾಮಾಣಿಕತೆ, ನಿಷ್ಠೆ, ದೇಶಪ್ರೇಮ, ಮಾನವೀಯತೆ ಮುಂತಾದ ಸದ್ಗುಣಗಳನ್ನು ತುಂಬುವುದರ ಮೂಲಕ ಇದು ಕೇವಲ ವಸತಿಶಾಲೆ ಮಾತ್ರ ಅಲ್ಲ **"ಸರ್ವಜನಾಂಗದ ಶಾಂತಿಯ ತೋಟ"** ಎಂಬ ದಿವ್ಯವಾದ ಸಂಕಲ್ಪದ ಸಂದೇಶವನ್ನು ಸಾರಲಾಗುತ್ತಿದೆ.